# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು, ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.**

**ವಿಷಯ:**

ಕೋಲಾರ ನಗರಕ್ಕೆ ಹೊಂದಿಕೊಂಡಂತೆ ಇರುವ ಅಂತರಗಂಗೆ ಶತ ಶೃಂಗ ಪರ್ವತಗಳ ಮೇಲೆ ಸುರಿಯುವ ಮಳೆಯ ನೀರು ಬೆಟ್ಟದ ತಪ್ಪಲಿನಿಂದ 1ನೇ ಮಾರ್ಗವಾಗಿ ಬಾಣಂತಿ ಕೆರೆಯಿಂದ ಪ್ರೆಸಿಡೆನ್ಸಿ ಶಾಲೆ, ಎಪಿಎಂಪಿ ಮಾರುಕಟ್ಟೆ, ಪವನ್ ಕಾಲೇಜು, ನಂದಗೋಕುಲ ಕಾಲೇಜು, ಸೈಯಾದಿ ಕಾಲೇಜು, ಟೇಕಲ್ ರಸ್ತೆಯ ರಾಜಕಾಲುವೆ ಮೂಲಕ ಬೆಮೆಲ್ ಲೇಔಟ್‌ನ ದೊಡ್ಡ ಪೋಷಕ ರಾಜಕಾಲುವೆ ಮೂಲಕ ಹರಿದು ಕೋಲಾರ ಅಮಾನಿಕೆರೆಗೆ ಸೇರಿಕೊಳ್ಳುತ್ತಿರುತ್ತದೆ. 2ನೇ ಮಾರ್ಗವಾಗಿ ಕೊಂಡರಾಜನಹಳ್ಳಿ ಕೆರೆಯಿಂದ, ಶಾಂತಿ ಕಲ್ಯಾಣ ಮಂಟಪ-ಎಪಿಎಂಪಿ ಮಾರುಕಟ್ಟೆ, ಪವನ್ ಕಾಲೇಜು, ನಂದಗೋಕುಲ ಕಾಲೇಜು, ಸೈಯಾದಿ ಕಾಲೇಜು, ಟೇಕಲ್ ರಸ್ತೆಯ ರಾಜಕಾಲುವೆ ಮೂಲಕ ಬೆಮೆಲ್ ಲೇಔಟ್‌ನ ದೊಡ್ಡ ಪೋಷಕ ರಾಜಕಾಲುವೆ ಮೂಲಕ ಹರಿದು ಕೋಲಾರ ಅಮಾನಿಕೆರೆಗೆ ಸೇರಿಕೊಳ್ಳುತ್ತಿರುತ್ತದೆ, ಇದೇ ರೀತಿ ಖಾದ್ರಿಪುರ, ರೆಹಮತ್ ನಗರ, ಶಾಂತಿನಗರ, ಕೆಎಸ್‌ಆರ್‌ಟಿಸಿ ಡಿಪೋ ಮುಂಭಾಗದಿಂದ ತಾಲ್ಲೂಕು ಪಂಚಾಯಿತಿ ಕಛೇರಿ ಪಕ್ಕದ ಮಾರ್ಗದಲ್ಲಿನ ಪೋಷಕ ಕಾಳುವೆ ಮೂಲಕ ಹರಿದು ಕೋಲಾರ ಅಮಾನಿಕೆರೆಗೆ ಸೇರಿಕೊಳ್ಳುತ್ತಿರುತ್ತದೆ. ಕೋಲಾರ ಅಮಾನಿಕೆರೆಯು ಸುಮಾರು 610 ಎಕರೆ ಪ್ರದೇಶದಲ್ಲಿನ ಅತ್ಯಂತ ದೊಡ್ಡ ಕೆರೆಯಾಗಿರುತ್ತದೆ. ಈಗಿರುವಾಗ, ಈ ಎಲ್ಲ ಮಾರ್ಗಗಳಲ್ಲಿನ ರಾಜ ಕಾಲುವೆಗಳು ಒತ್ತುವರಿಗೊಂಡಿದ್ದು, ಅಂತರಗಂಗೆ ಶತ ಶೃಂಗ ಪರ್ವತಗಳಿಂದ ಹರಿದು ಬರುವ ಮಳೆ ನೀರು ಸರಾಗವಾಗಿ ರಾಜ ಕಾಲುವೆಗಳ ಮೂಲಕ ಹರಿದು ಹೋಗದೆ ರಸ್ತೆಗಳ ಮೇಲೆ ಹರಿಯುತ್ತಿದೆ, ಈ ರೀತಿ ಒತ್ತುವರಿಯಾದ ರಾಜ ಕಾಲುವೆಗಳನ್ನು ತೆರವುಗೊಳಿಸಲು ಸರ್ಕಾರ ಈ ಕೂಡಲೇ ಕ್ರಮ ಕೈಗೊಂಡು, ಇಂತಿಷ್ಟು ಕಾಲಮಿತಿಯೊಳಗೆ ಒತ್ತುವರಿಯನ್ನು ತೆರವುಗೊಳಿಸಿ, ರಾಜ ಕಾಲುವೆಗಳ ಮೂಲಕ ನೀರು ಹರಿದು ಹೋಗುವಂತೆ ಮಾಡಬೇಕಾಗಿರುವುದು ಸರ್ಕಾರದ ಜವಾಬ್ದಾರಿ, ಆದ ಕಾರಣ ಈ ವಿಷಯವನ್ನು ತಮ್ಮ ನಂಬುಗೆಯ ಮಾನ್ಯ ಸಣ್ಣ ನೀರಾವರಿ ಸಚಿವರ ಗಮನಸೆಳೆಯಲು ಬಯಸುತ್ತೇನೆ.

**ಉತ್ತರ**

ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕಿನ ಕೋಲಾರ ಅಮಾನಿಕೆರೆಯು ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಯಲ್ಲಿ ಬರುತ್ತಿದ್ದು, 318 ಹೆಕ್ಟೇರ್ ಅಚ್ಚುಕಟ್ಟು, 182.38 ಹೆಕ್ಟೇರ್ ಜಲಾವೃತ್ತ ಪ್ರದೇಶ ಮತ್ತು 172.24 ಎಂ.ಸಿ.ಎಫ್.ಟಿ ನೀರಿನ ಶೇಖರಣಾ ಸಾಮರ್ಥ್ಯವನ್ನು ಹೊಂದಿರುತ್ತದೆ. ಸದರಿ ಕೆರೆಯು ಕೋಲಾರ ನಗರಕ್ಕೆ ಹೊಂದಿಕೊಂಡಿರುವುದರಿಂದ, ಈ ಕೆರೆಯ ರಾಜ ಕಾಲುವೆಗಳು ನಗರಸಭೆ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಕೋಲಾರ ಅಮಾನಿಕೆರೆಗೆ 04 ಮುಖ್ಯ ರಾಜ ಕಾಲುವೆಗಳಿಂದ ತ್ಯಾಜ್ಯ ನೀರು ಕೆರೆಗೆ ಸೇರುತ್ತಿರುತ್ತದೆ. ಇದಲ್ಲದೆ ಸದರಿ ಕಾಲುವೆಗಳಲ್ಲಿ ಸಾರ್ವಜನಿಕರು ಘನ ತ್ಯಾಜ್ಯ ವಸ್ತುಗಳನ್ನು ಸುರಿಯುತ್ತಿರುವುದರಿಂದ ನೀರು ಸರಾಗವಾಗಿ ಹರಿಯದೆ, ಮಳೆ ಹೆಚ್ಚಾಗಿ ಬಿದ್ದಂತಹ ಸಂದರ್ಭದಲ್ಲಿ ನೀರು ಕಾಲುವೆಯಲ್ಲಿ ಹರಿಯದೇ ರಸ್ತೆಯ ಮೇಲ್ಭಾಗ ಹರಿದಿರುವುದನ್ನು ಸಹ ಗಮನಿಸಲಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಮುಂದಾಗುವ ಅವಗಡಗಳನ್ನು ತಪ್ಪಿಸಲು ರಾಜ ಕಾಲುವೆಗಳಲ್ಲಿ ಇಲಾಖಾ ವತಿಯಿಂದ ಸ್ವಚ್ಛತೆ ಕಾರ್ಯವನ್ನು ಸಹ ಕೈಗೊಳ್ಳಲಾಗಿರುತ್ತದೆ. ಇದಲ್ಲದೆ 2022-23ನೇ ಸಾಲಿನಲ್ಲಿ ರಾಜ ಕಾಲುವೆಗಳಲ್ಲಿನ ಹೂಳು ತೆಗೆಯುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಹೂಳನ್ನು ತೆಗೆದು ಕಾಲುವೆಯಲ್ಲಿ ಸರಾಗವಾಗಿ ನೀರು ಹರಿಯಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಕೆರೆ ಒತ್ತುವರಿಯಾಗಿರುವ ಬಗ್ಗೆ ನಗರಸಭೆ ಆಯುಕ್ತರು, ಕೋಲಾರ ರವರಿಗೆ ಹಲವಾರು ಬಾರಿ ಸಣ್ಣ ನೀರಾವರಿ ಇಲಾಖಾವತಿಯಿಂದ ಪತ್ರ ವ್ಯವಹಾರವನ್ನು ಮಾಡಲಾಗಿದ್ದು, ಒತ್ತುವರಿ ತೆರವುಗೊಳಿಸಲು ಕೋರಲಾಗಿದೆ. ಕೋಲಾರ ಅಮಾನಿಕೆರೆಗೆ ಕೆ .ಸಿ. ವ್ಯಾಲಿ ನೀರು ಸಹ ಹರಿದು ಬರುತ್ತಿರುವುದರಿಂದ, ರಾಜ ಕಾಲುವೆಗಳ ಒತ್ತುವರಿಯನ್ನು ತೆರವುಗೊಳಿಸುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ ನಗರಸಭೆ, ಸಣ್ಣ ನೀರಾವರಿ ಇಲಾಖೆ ಮತ್ತು ಕಂದಾಯ ಇಲಾಖೆಯ ಸಹಯೋಗದೊಂದಿಗೆ ಒತ್ತುವರಿಯನ್ನು ತೆರವುಗೊಳಿಸಲು ಕ್ರಮವಹಿಸಲಾಗುವುದು.

ಕಡತ ಸಂಖ್ಯೆ:MID 18 LCQ 2023

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ
ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.